**OS.No.**29/2020 **DW**-3

**ದಿನಾಂಕಃ 03.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು ವಾದಿ ಪರ ಶ್ರೀ. ಎಸ್.ಎ. ವಕೀಲರಿಂದಃ-**

ನಾನು ಪುಡ್ ಕಾರ್ಪೋರೇಶನ್ ಆಫ್ ಇಂಡಿಯಾದಲ್ಲಿ ಕೆಲಸ ಮಾಡುತ್ತಿದ್ದೆ. ನಾನು ನಿವೃತ್ತಿ ಹೊಂದಿ 17 ವರ್ಷಗಳಾಗಿವೆ. ನೀವು ನಿವೃತ್ತಿಯಾದ ನಂತರ ಖಾಯಂ ಆಗಿ ಎಲ್ಲಿ ವಾಸವಾಗಿದ್ದೀರಿ ಎಂದರೆ ಸಾಕ್ಷಿ ಬೆಂಗಳೂರಿನಲ್ಲಿ ವಾಸವಾಗಿದ್ದೆ, ಅದರೆ ಈಗ 3 ವರ್ಷಗಳಿಂದ ನಾನು ಚಿಟ್ಟನಹಳ್ಳಿಯಲ್ಲಿ ವಾಸವಾಗಿದ್ದೇನೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಯಾವ ಉದ್ದೇಶಕ್ಕಾಗಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ದುರಸ್ತಿ ತಪ್ಪಾಗಿದೆ ಎಂದು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. 1 ರಿಂದ 3ನೇ ಪ್ರತಿವಾದಿಗಳು ನನ್ನ ದೊಡ್ಡಪ್ಪನ ಮಕ್ಕಳು. ಅಣ್ಣನ ಮಕ್ಕಳು ಎಂದರೆ ದಾಯಾದಿಗಳು. ನಾನು ನಮ್ಮ ಅಣ್ಣಂದಿರ ಕಾಲದಿಂದಲೂ 1 ರಿಂದ 3ನೇ ಪ್ರತಿವಾದಿಗಳ ಜೊತೆ ಚೆನ್ನಾಗಿದ್ದೇನೆ ಎಂದರೆ ಹೌದು. ನಾನು ಈ ದಾವೆಗೆ ಏನೆಂದು ಪ್ರತಿವಾದ ಪತ್ರ ಸಲ್ಲಿಸಿದ್ದೇನೆ ಎಂದು ಗೊತ್ತಿದೆ. ಪ್ರತಿವಾದ ಪತ್ರ ಸಲ್ಲಿಸುವಾಗ 1 ರಿಂದ 3 ನೇ ಪ್ರತಿವಾದಿಯರರೊಂದಿಗೆ ವಿಚಾರಣೆ ಮಾಡಿಯೇ ಸಲ್ಲಿಸಿರುತ್ತೇನೆ ಎಂದರೆ ಹೌದು. 1 ರಿಂದ 3 ನೇ ಪ್ರತಿವಾದಿಯರು ಏನು ಪ್ರತಿವಾದ ಪತ್ರ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. 1 ರಿಂದ 3 ನೇ ಪ್ರತಿವಾದಿಯರ ಮತ ಬೇರೆ ಮತ್ತು ನನ್ನ ಮತ ಬೇರೆ ಎಂದರೆ ಹೌದು.

ನನಗೆ ಚಿಕ್ಕನಹಳ್ಳಿ ಗ್ರಾಮದಲ್ಲಿ ಅಸ್ತಿ ಇದೆ ಎಂದರೆ ಹೌದು. ಅದೇ ರೀತಿ ವಾದಿ ಹಾಗೂ 1 ರಿಂದ 3 ನೇ ಪ್ರತಿವಾದಿಯರಿಗೂ ಸಹಾ ಚಿಕ್ಕನಳ್ಳಿ ಗ್ರಾಮದಲ್ಲಿ ಆಸ್ತಿ ಇದೆ ಎಂದರೆ ಹೌದು. ನಾನು ನನ್ನ

ಜಮೀನನ್ನು 1 ರಿಂದ 3 ನೇ ಪ್ರತಿವಾದಿಯರು ಅವರ ಜಮೀನನ್ನು ಹಾಗೂ ವಾದಿ ತನ್ನ ಜಮೀನನ್ನು ಅನುಬೋಗ ಮಾಡುತ್ತಾ ಬರುತ್ತಿರುತ್ತಾರೆ ಎಂದರೆ ಸಾಕ್ಷಿ ನಾನು ನನ್ನ ಜಮೀನಿನ ಅನುಬೋಗದಲ್ಲಿದ್ದೇನೆ, ವಾದಿ ಯಾವ ಜಮೀನಿನ ಅನುಬೋಗದಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಚಿಕ್ಕನಹಳ್ಳಿ ಗ್ರಾಮದ ಸ.ನಂ. 33/1 ರಲ್ಲಿ 2 ಎಕರೆ 12 ವರೇ ಗುಂಟೆ, ಸ.ನಂ.33/5 ರಲ್ಲಿ 1 ಎಕರೆ ನಾಲ್ಕುವರೇ ಗುಂಟೆ ಆಸ್ತಿ ವಾದಿಯ ಹೆಸರಿನಲ್ಲಿದೆ ಎಂದು ಬರೆಸಿದ್ದೇನೆ ಎಂದರೆ ಹೌದು. 2 ಎಕರೆ 12 ವರೇ ಗುಂಟೇ ಆಸ್ತಿಯ ಚೆಕ್ಕುಬಂದಿಯಲ್ಲಿ ಒಂದು ಕಡೆಗೆ ನನ್ನ ಅಸ್ತಿ ಬರುತ್ತದೆ ಎಂದರೆ ಹೌದು. 2 ಎಕರೆ 12 ವರೇ ಗುಂಟೆ ಆಸ್ತಿಯ ಪೂರ್ವಕ್ಕೆ ಧನರಾಜು, ಪಶ್ಚಿಮಕ್ಕೆ ಕರೀಗೌಡ, ಉತ್ತರಕ್ಕೆ ಎಡದಂಡೆ ನಾಲೆ ಮತ್ತು ದಕ್ಷಿಣಕ್ಕೆ ರಂಗಯ್ಯರವರ ಜಮೀನು ಬರುತ್ತದೆ ಎಂದರೆ ಸಾಕ್ಷಿ ಪೂರ್ವಕ್ಕೆ ನಾಗೇಶರವರ ಜಮೀನು, ಪಶ್ಚಿಮಕ್ಕೆ ಸರ್ಕಾರಿ ಹಳ್ಳ ನಂತರ ನನ್ನ ಜಮೀನು ಬರುತ್ತಿದ್ದು, ಉತ್ತರಕ್ಕೆ ಎಡದಂಡೆ ನಾಲೆ ಮತ್ತು ದಕ್ಷಿಣಕ್ಕೆ ರಂಗಯ್ಯರವರ ಆಸ್ತಿ ಬರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳುವಂತಹ ನಾಗರಾಜು ಮತ್ತು 2ನೇ ಪ್ರತಿವಾದಿ ಅಣ್ಣತಮ್ಮಂದಿರು ಇದ್ದು, ಅವರ ಮಧ್ಯೆ ಆಸ್ತಿಗಳಲ್ಲಿ ಪಾಲು ವಿಭಾಗ ಆಗಿವೆ ಎಂದರೆ ಹೌದು. ನಾಗೇಶ್ ಉಪನ್ಯಾಸಕರಾಗಿ ನಿವೃತ್ತಿ ಹೊಂದಿದ್ದು, ಅರಸೀಕೆರೆಯಲ್ಲಿ ವಾಸವಾಗಿರುತ್ತಾರೆ. 2ನೇ ಪ್ರತಿವಾದಿ ಪಶು ಇಲಾಖೆಯಲ್ಲಿದ್ದು ಚಿಟ್ಟನಹಳ್ಳಿಯಲ್ಲಿ ವಾಸವಾಗಿದ್ದಾರೆ. ಸ.ನಂ.33/5 ರಲ್ಲಿ 1 ಎಕರೆ ನಾಲ್ಕುವರೇ ಗುಂಟೆ ಆಸ್ತಿಯ ಚೆಕ್ಕುಬಂದಿ ಎಂದರೆ ಪೂರ್ವಕ್ಕೆ ವೆಂಕಟೇಶ ರವರ ಜಮೀನು,

ಪಶ್ಚಿಮಕ್ಕೆ: 1 ಮತ್ತು 2ನೇ ಪ್ರತಿವಾದಿಯರ ಜಮೀನು, ಉತ್ತರಕ್ಕೆ: ಎಡದಂಡೆ ನಾಲೆ ಮತ್ತು ದಕ್ಷಿಣಕ್ಕೆ ಅಣ್ಣಯ್ಯರವರ ಜಮೀನು ಬರುತ್ತದೆ ಎಂದರೆ ಸರಿ.

ನನ್ನ ತಂದೆ ಹೆಸರು ಲಕ್ಕೇಗೌಡ, ತಾಯಿ ಹೆಸರು ನಿಂಗಮ್ಮ. ನನ್ನ ತಂದೆ ತಾಯಿ ಈಗ ಜೀವಂತವಾಗಿಲ್ಲ ಎಂದರೆ ಹೌದು. ಅವರಿಗೆ ನಾನು ಒಬ್ಬನೇ ಮಗ ಇರುತ್ತೇನೆ. ಹೆಣ್ಣು ಮಕ್ಕಳು ಇರುವುದಿಲ್ಲ. ನಿಮ್ಮ ತಂದೆ ಜೀವಂತವಿದ್ದಾಗ ಅವರಿಗೆ ಚಿಕ್ಕನಹಳ್ಳಿ ಗ್ರಾಮದಲ್ಲಿ ಎಷ್ಟು ಆಸ್ತಿಗಳು ಇತ್ತು ಎಂದು ಗೊತ್ತಾ ಎಂದರೆ ಸಾಕ್ಷಿ ಗೊತ್ತು ಎಂದು ನುಡಿಯುತ್ತಾರೆ. ನಿವೃತ್ತಿ ಹೊಂದಿದ ನಂತರ ನನ್ನ ತಂದೆ ಆಸ್ತಿಗಳನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ ಎಂದರೆ ಹೌದು. ನಿಮ್ಮ ತಂದೆ ಹೆಸರಿಗೆ ಯಾವ ಯಾವ ಸರ್ವೆ ನಂಬರುಗಳಲ್ಲಿ ಎಷ್ಟೆಷ್ಟು ಜಮೀನುಗಳು ಇದ್ದವು ಎಂದರೆ ಸಾಕ್ಷಿ ಚಿಕ್ಕನಹಳ್ಳಿ ಗ್ರಾಮದ ಸ.ನಂ. 32/2 ರಲ್ಲಿ 2 ಎಕರೆ 8 ಗುಂಟೆ, 32/3 ರಲ್ಲಿ 11 ಗುಂಟೆ, 32/ ರಲ್ಲಿ 10 ಗುಂಟೆ ಹಾಗೂ 32/6 ರಲ್ಲಿ ರಲ್ಲಿ 36 ಗುಂಟೆ ಆಸ್ತಿ ಇದ್ದವು ಎಂದು ನುಡಿಯುತ್ತಾರೆ. ನಿಮ್ಮ ತಂದೆ ಮತ್ತು ತಾಯಿ ಜೀವಂತ ಇದ್ದಾಗ ಯಾವುದಾದಾರೂ ಆಸ್ತಿಗಳನ್ನು ಮಾರಾಟ ಮಾಡಿದ್ದಾರಾ ಎಂದರೆ ಸಾಕ್ಷಿ ಯಾವುದನ್ನೂ ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ನಾಲ್ಕು ಸರ್ವೆ ನಂಬರುಗಳು ಹಾಲಿ ಇರುವ ಮತ್ತು ನಾನು ಸಾಗು ಮಾಡುತ್ತಿರುವ ಜಮೀನುಗಳು ಎಂದರೆ ಹೌದು. ನಿಮ್ಮ ತಂದೆ ತಾಯಿಯಿಂದ ಪೌತಿ ಖಾತೆ ಆಧಾರದ ಮೇಲೆ ನಿಮಗೆ ಬಂದಿರುವ ಅಸ್ತಿಗಳ ಸರ್ವೆ ನಂಬರ್ ಮತ್ತು ವಿಸ್ತೀರ್ಣಗಳು ಸರಿಯಾಗಿವೆ ಎಂದರೆ ಹೌದು. ನಿಮ್ಮ ತಂದೆ ತಾಯಿ ಬಿಟ್ಟು ಹೋದ ಜಮೀನುಗಳನ್ನು ನೀವೇ ಸಾಗು ಮಾಡಿಸುತ್ತಿದ್ದೀರಿ ಎಂದರೆ ಸಾಕ್ಷಿ ನಾನೇ

ಸಾಗು ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನಮ್ಮ ತಂದೆ ತಾಯಿಯಿಂದ ನಿಮಗೆ ಬಂದಂತಹ ಆಸ್ತಿಗಳಲ್ಲಿ ವಿಸ್ತೀರ್ಣದಲ್ಲಾಗಲೀ, ಚೆಕ್ಕುಬಂದಿಯಲ್ಲಿಯಾಗಲೀ ಮತ್ತು ಸರ್ವೆ ನಂಬರ್ ನಲ್ಲಿಯಾಗಲೀ ಯಾವುದೇ ವ್ಯತ್ಯಾಸ ಇರಲಿಲ್ಲ ಎಂದರೆ ಹೌದು. ಎಲ್ಲಾ ಸರಿಯಾಗಿ ಇದುದ್ದರಿಂದ ನಿಮ್ಮ ತಂದೆಯಿಂದ ನಿಮಗೆ ಬಂದಂತಹ ಆಸ್ತಿಗಳನ್ನು ನೀವು ಸರ್ವೆ ಮಾಡಿಸಲಿಲ್ಲ ಎಂದರೆ ಹೌದು.

ದಿನಾಂಕಃ12.022020 ರಂದು ನಾನು ವಾದಿಯರಿಗೆ ಕ್ರಯ ಪತ್ರ ಮಾಡಿಕೊಟ್ಟಿರುತ್ತೇನೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಹೌದು. ನನ್ನ ಸ್ವಾಧೀನದಲ್ಲಿ ಎಷ್ಟು ಕ್ಷೇತ್ರ ಇತ್ತೋ ಅಷ್ಟಕ್ಕೆ ನಾನು ವಾದಿಗೆ ಕ್ರಯ ಪತ್ರ ಮಾಡಿಕೊಟ್ಟಿರುತ್ತೇನೆ, ಅದರಲ್ಲಿ ಹೆಚ್ಚು ಇಲ್ಲ, ಕಡಿಮೆಯೂ ಸಹಾ ಇಲ್ಲ ಎಂದರೆ ಹೌದು.

ವಕೀಲರ ಕೋರಿಕೆಯ ಮೇರೆಗೆ ಪಾಟಿ ಸವಾಲು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಇದೆ.

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.